Regd No BG 155

— ಶ್ರೀ —

18—1—1962

Sri "SATYAVADI"
— DAILY —
MYSORE 4
46 th Year

ಸತ್ಯವಾದಿ
SATYAVADI

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

Protect the cow

ಸ್ಥಾಪಕರು— ಅರಮನೆ ಸಿಂಹೇದಾರ್ ಎಂ. ಎ ಸುಬ್ಬರಾಯುರು [ಬಿಡಿ ಪ್ರತಿ 3 ಪೈ

ಗೋಸಂರಕ್ಷಣೆ ಮಾಡಿ

ಮೈಸೂರು ನಗರದಲ್ಲಿ ಭತ್ತದ ದಾಸ್ತಾನು 1 ಲಕ್ಷ 10 ಸಾವಿರ ಪಲ್ಲ

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕು ಪಾಲಹಳ್ಳಿಯಲ್ಲಿ ರಾಜ್ಯದ ಹೌಸಿಂಗ್ ಕಾರ್ಪೊರೇಷನ್ ಅಶ್ರಯ ಮೆದಲ್ಲಿ ಕಟ್ಟಲಾದ ದಾಸ್ತಾನು ಮಳಿಗೆ ಪ್ರಾರಂಭೋತ್ಸವವನ್ನು ಕಾರ್ಪೊರೇಷನ್ನಿನ ಮ್ಯಾನೇಜಿಂಗ್ ಡೈರೆಕ್ಟರ್‌ರವರಾದ ಶ್ರೀ ಆರ್. ಭೂಣಯ್ಯನವರು ನಿನ್ನೆ ಬೆಳಿಗ್ಗೆ ನೆರವೇರಿಸುತ್ತಾ, ಈ ವರೆಗೆ 7 ಸ್ಥಳಗಳಲ್ಲಿ 27 ದಾಸ್ತಾನು ಮಳಿಗೆಗಳನ್ನೇರ್ಪಡಿಸಿದೆ, ಈ ಅನುಕೂಲತೆಯಿಂದ ಸುಮಾರು 4 ಲಕ್ಷ ಪಲ್ಲ ದವಸವನ್ನು ದಾಸ್ತಾನು ಮಾಡಿ ಜೊತೆಗೆ ಅಗತ್ಯವೆನಿಸಿದ ರೈತರಿಗೆ ಸುಮಾರು ಎರಡು ಕೋಟಿ ರೂ. ಗಳ ಸಾಲವನ್ನು ಮಂಜೂರು ಮಾಡಲಾಗಿದೆ ಎಂದರು ಮೈಸೂರು ನಗರ ಒಂದರಲ್ಲಿಯೇ ಒಂದು ಲಕ್ಷ 10 ಸಾವಿರ ಪಲ್ಲ ಭತ್ತವನ್ನು ಶೇಖರಿಸಲಾಗಿದೆ ಇದಲ್ಲದೆ ತಿರುಮಕೂಡಲು ನರಸೀಪುರ ಮತ್ತು ಬನ್ನೂರು ಕೇಂದ್ರಗಳಲ್ಲಿಯೂ ಸಾಕಾದಷ್ಟು ಧಾನ್ಯಗಳನ್ನು ದಾಸ್ತಾನು ಮಾಡಲಾಗಿದೆ ಎಂದರು

ಅಧ್ಯಕ್ಷತೆ ವಹಿಸಿದ್ದ ಶ್ರೀ ಎಂ ವಿ ಜೋಯಿಸರವರು ಮಾತನಾಡಿ, ಈ ಮಳಿಗೆ ರೈತರು ಮತ್ತು ವ್ಯಾಪಾರಿಗಳ ಹಿತವನ್ನು ರಕ್ಷಿಸುವ ಮಾದರಿ ಮಳಿಗೆ ಆಗಲಿ ಎಂದು ಹಾರೈಸಿದರು.

★

ಪ್ರಕಟಣೆ

ಜೋಗ ವಿದ್ಯುತ್ತಿನ ಕೇಂದ್ರದಲ್ಲಿ 18000 ಕಿ ವಾ ವಿದ್ಯುಜ್ಜನಕ ಯಂತ್ರ ಕೆಟ್ಟುಹೋಗಿರುವದರಿಂದ ಮೈಸೂರಿನಲ್ಲಿ ನಿನ್ನೆಯಿಂದ 4ದಿವಸ ರಾತ್ರಿ ವೇಳೆ ಬೀದಿ ದೀಪಗಳನ್ನು ಹೊತ್ತಿಸಲಾಗುವದಿಲ್ಲ ವಶ್ಯ ಬೇಕಾದ ಜಾಗ 4 ವರೆಯಿಂದ 6 ಗಂಟೆ ವರೆಗೆ ಮಾತ್ರ ದೀಪಗಳಿರುವವೆಂದು ಪುರಸಭೆ ಕಮಿಷನರು ತಿಳಿಸಿದ್ದಾರೆ

ಬ್ರಿಟನ್ನಿನಲ್ಲಿ ವ್ಯಾಪಾರ

ಕಳೆದ ವರ್ಷ ಬ್ರಿಟನ್ನಿನ ಎಲ್ಲ ಹೋಟಲುಗಳು ಒಟ್ಟಿಗೆ 1'00283 ರ್ಧ ಪವನುಗಳಷ್ಟು ವ್ಯಾಪಾರ ಮಾಡಿವೆ. ಇದರಲ್ಲಿ ಊಟ ಮತ್ತು ಉಪಾಹಾರದ ಮೊತ್ತ 381309000 ಪವನುಗಳು ಪಿಗರೇಟುಗಳು ಹಾಗೂ ಹೊಗೆಸೊಪ್ಪು 163062000 ಪವನುಗಳು ಎಲ್ಲಕ್ಕಿಂತ ಹೆಚ್ಚಿಗಿರುವ ಕೀಳಕಿಗಳು ಮದ್ಯಗಳಿಗೆ 623318000 ಪವನುಗಳು

ಇಂದು ಆಗಮನ

ಡೆನ್ಮಾರ್ಕಿನ ಪ್ರಧಾನಿಗಳಾದ ನಿಗೊ ಕಂಪರ್ಮಂರವರು ತಮ್ಮ ಪತ್ನಿಯವರೊಡನೆ ಈ ಮಾಹೆ 24 ರಂದು ಬೆಂಗಳೂರು ಮೂಲಕ ಮೈಸೂರು ನಗರಕ್ಕೆ ಬರುವರು ದಾರಿಯಲ್ಲಿ ಶಿವನಸಮುದ್ರದಲ್ಲಿರುವ ಜಲ ವಿದ್ಯುತ್ ಶಕ್ತಿ ಯೋಜನಾ ಕ್ಷೇತ್ರಕ್ಕೆ ಭೇಟಿಕೊಡುವರು. ಮೈಸೂರಿನಲ್ಲಿ ಅವರು ಗಂಧದೆಣ್ಣೆ ಕಾರ್ಖಾನೆ, ರೇಷ್ಮೆ ಕಾರ್ಖಾನೆ ಹಾಗೂ ಕೃಷ್ಣರಾಜಸಾಗರ ಅಣೆಕಟ್ಟುಗಳಿಗೆ ಭೇಟಿಕೊಡುವರು ಮಾರನೆಯ ದಿನ ಅವರು ಬೆಂಗಳೂರಿಗೆ ಹಿಂದಿರುಗುವರು,

ಈ ಮಧ್ಯಾಹ್ನ ಅವರು ನವ ದೆಹಲಿಗೆ ಆಗಮಿಸುವರು

oo

ಕೃಷಿಯನ್ನು ಹತೋಟಿ ಮಾಡಲು ಪಶ್ಚಿಮ ಬಂಗಾಳ ಸರ್ಕಾರ ರೂ. 1_02 ಕೋಟಿ ವೆಚ್ಚ ಮಾಡುವದು.

ಪಾಲಂ ವಿಮಾನ ನಿಲ್ದಾಣದಲ್ಲಿ ಎರಡು ವಿಮಾನಗಳು ಡಿಕ್ಕಿ ಹೊಡೆದು ಈರ್ವರು ಮರಣಹೊಂದಿದರು

ಈ ಮಾಹೆ 23 ರಿಂದ ಸೇಲಂ ಬೆಂಗಳೂರು ರೈಲ್ವೆ ಲೈನಿನ ಕಾರ್ಯಾರಂಭ ಮಾಡಿದೆ.

ಬುದ್ಧನ ಪ್ರತಿಮೆ ಮೂರಾಟ

2—3 ಸಾವಿರ ಶತಮಾನದ ಗಾಂಧಾರ ಶೈಲಿಯ ಜೀವಂತ ಆಕಾರದ ಬುದ್ಧನ ಪ್ರತಿಮೆಯೊಂದು 7 ವರೆ ಸಾವಿರ ಡಾಲರುಗಳಿಗೆ ಮಾರಿಹೋಯಿತೆಂದು ಹಾಂಬರ್ಗಿನ ವಾರ್ತೆ.

ನಡವಳಿಕೆ ಭಂಗ

ಕಾರಾಪುರದಲ್ಲಿ ಮೊನ್ನೆ ಮಾಜಿ ಉಪ ಮಂತ್ರಿ ಶ್ರೀ ರಾಮಕೃಷ್ಣ ಹೆಗ್ಡೆಯವರು ಕಾಂಗ್ರೆಸಿನ ಚುನಾವಣಾ ಪ್ರಚಾರ ಭಾಷಣವನ್ನು ಮಾಡತ್ತಾ, ಪಿಎಸ್ಪಿ ಪಂಡ ಪಂಸ್ಥೆ, ಗಂಡಲ್ಲ ಹೆಣ್ಣಲ್ಲ ಎಂದಾಗ ಸ್ವಲ್ಪ ಗೊಂದಲವಾಯಿತು ಅಲ್ಲಿದ್ದ ಪಿಎಸ್ಪಿ ಕಾರ್ಯಾದರ್ಶಿ ಲಕ್ಷ್ಮೀಪಿಸಿದರು. ರಾಜಕೀಯ ಪಕ್ಷಗಳು ರೂಪಿಸಿದ್ದ ಚುನಾವಣೆ ನಡವಳಿಕೆಯನ್ನು ಹೆಗ್ಡೆಯವರು ಭಂಗಪಡಿಸಿದರೆಂದು ಪಿಎಸ್ಪಿ ತಿಳಿಸಿದೆ.

ಕೆಲಸ ನಿಂತಿದೆ

ಅಡಕಿತ ವರ್ಗದ ಕಬ್ಬಿಣಕೊಳ್ಳುವ ನೀತಿಯನ್ನು ಪ್ರತಿಭಟಿಸಿ ಸಕ್ಕರೆ ಕಾರ್ಖಾನೆಗೆ ರೈತರು ಕಬ್ಬು ಕೊಡುವದನ್ನು ನಿಲ್ಲಿಸಿದ್ದರಿಂದ ಮಂಡ್ಯದ ಸಕ್ಕರೆ ಕಾರ್ಖಾನೆಯ ಕೆಲಸ ನಿಂತಿದೆ.

★

ಜಮ್ಮು ಮತ್ತು ಕಾಶ್ಮೀರ ಬಿಟ್ಟು ಉಳಿದ ಕಡೆ ಮತದಾನ ಮಾಡುವದಲ್ಲಿ ಗುರುತುಹಾಕುವ ಕ್ರಮ ಇದೆ

ರಾಷ್ಟ್ರಪತಿಯವರು ಭಾಗವಹಿಸುವದಿಲ್ಲ

ರಾಷ್ಟ್ರಪತಿ ಡಾ॥ ರಾಜೇಂದ್ರ ಪ್ರಸಾದರಿಗೆ ಕಣ್ಣಿನೋವಿನ ಕಾಯಿದೆ ಔಷಧೋಪಚಾರಕ್ಕೆ ಪಾಟ್ನಾದಿಂದ ವೈದ್ಯ ಬರುವರು ಆವರು ಗಣರಾಜ್ಯ ಸಮಾರಂಭದಲ್ಲಿ ಭಾಗವಹಿಸುವುದಿಲ್ಲ

ಉದ್ಘಾಟನೆ

ಮೈಸೂರು ರಾಜ್ಯದ ಉಪ ಗೃಹ ಮಂತ್ರಿ ಶ್ರೀ ಬಿ ಬಸವಲಿಂಗಪ್ಪನವರು ನಿನ್ನೆ ಬೆಳಿಗ್ಗೆ ಮೈಸೂರು ದಸರಾ ದರ್ಶನಾಲಯದಲ್ಲಿ ಜಿಲ್ಲಾ ವಾರ್ತಾ ಕೇಂದ್ರ ಹಾಗೂ ಪ್ರವಾಸಿ ಸ್ವಾಗತ ಕಚೇರಿಯನ್ನು ಉದ್ಘಾಟಿಸುತ್ತಾ, ಈ ಕೇಂದ್ರ, ಸರ್ಕಾರ ನಡೆಸುವ ಕಾರ್ಯಸಾಧನವನ್ನು ತಿಳಿಸುವ ಕನ್ನಡಿಯಾಗಿರುವುದು ಎಂದರು ವಾರ್ತಾ ಇಲಾಖೆ ಡೈರೆಕ್ಟರ್ ಶ್ರೀ ವಜೀರ್ ಅಹಮದ್ ಸ್ವಾಗತ ಭಾಷಣಮಾಡಿದರು. ಪ್ರವಾಸೋದ್ಯಮ ಶಾಖೆ ಡೈರೆಕ್ಟರಾದ ಶ್ರೀ ಪಿ ಗುಂಡಶೆಟ್ಟರು ಪ್ರವಾಸೋದ್ಯಮ ಬಗ್ಗೆ ವಿವರಿಸಿದರು. ಜಿಲ್ಲಾ ವಾರ್ತಾಧಿಕಾರಿ ಶ್ರೀ ಜಿ ರಂದ್ರಯ್ಯನವರು ವಂದ್ಯ ಅತಿಥಿಗಳಿಗೆ ಉಪಾಹಾರ ಏರ್ಪಡಿಸಿದರು ಶ್ರೀ ಸುಬ್ಬರಾಯುರು ವಂದನಾರ್ಪಣೆ ಮಾಡಿದರು.

ನಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪಕ್ಕೃಷ್ಣ ಜೋಯಿಸರಿಂದ

19 ಚಮುರ್ದಶಿ ಅರಿಡಾ

ವಿದ್ಯಾರ್ಥಿಗಳ ಮುಷ್ಕರ

ಮೈಸೂರು 17 — ಜಿ ಸಿ ಎ ಎಂ ವಿದ್ಯಾರ್ಥಿಗಳು ತಮ್ಮ ಮುಷ್ಕರದ 6 ನೆಯ ದಿನವಾದ ಇಂದು ಕೂಡಾ ಶಾಂತರೀತಿಯಿಂದ ವರ್ತಿಸಿದರು ಬಳ್ಳಾರಿ ಹಾಗೂ ಬೆಳಗಾಂ ಕಾಲೇಜುಗಳಲ್ಲೂ ಕೂಡ ಜಿ ಸಿ ಎ ಎಂ ವಿದ್ಯಾರ್ಥಿಗಳು ಸಭ್ಯತೆಯಿಂದ ಮತ್ತು ಶಾಂತರೀತಿಯಿಂದ ಮುಷ್ಕರವನ್ನು ನಡೆಸುತ್ತಿದ್ದಾರೆ. ತಮ್ಮ ಬೇಡಿಕೆಗಳು ಆದಷ್ಟು ಬೇಗ ಈಡೇರುವದೆಂಬ ಭರವಸೆಯು ಎಲ್ಲ ವಿದ್ಯಾರ್ಥಿಗಳಲ್ಲಿಯೂ ಬಲವಾಗಿದೆ. ವಿದ್ಯಾರ್ಥಿಗಳು ಈ ವಿಚಾರದಲ್ಲಿ ಮಾನ್ಯ ಸಂಸ್ಥಾಕ ಶೀಘ್ರವಾಗಿ ಪರ್ಯಾಲೋಚಿಸಲಿ ಎಂದು ಹಾರೈಸಿದರು.

ವಿಚಾರಣೆ ಬಗ್ಗೆ ಸೂಚನೆ

ಅಲಾಪೆಗಳಲ್ಲಿ ಸಂಭವಿಸಿದ ಪ್ರಕರಣಗಳಲ್ಲಿ ವಿಚಾರಣೆ ಮಾಡಲು ಅಧಿಕಾರಿಗಳನ್ನೇ ನೇಮಕ ಮಾಡಬೇಕೆಂದು ಭಾರತದ ಮಂತ್ರಿ ಶಾಖೆಗಳಿಗೆ ಸೂಚನೆ ಕೊಟ್ಟಿದೆ

೦೦

ಭಾರತದ ಅಚ್ಚೇಧಾಗುವ ವಸ್ತುಗಳ ಮೇಲೆ ವಿಧಿಸುವ ಅಬಕಾರಿ ತೆರಿಗೆಯಲ್ಲಿ ರಿಯಾಯಿತಿಯನ್ನು ಕೊಡುವ ಸಂಬಂಧವಾದ ಕಾರ್ಯವಿಧಾನವನ್ನು ಅಲ್ಯೂಮಿನಿಯಂ ಪಾತ್ರೆಪಡಿಗಗಳಿಗೂ ವಿಸ್ತರಿಸಲು ಭಾರತ ಸರ್ಕಾರವು ನಿರ್ಧರಿಸಿದೆ

೦೦

ಅರನೆಯ ಅಖಿಲ ಭಾರತ ಬಿ ಸಿ ಜಿ ಸಮ್ಮೇಳನವು ಬೆಂಗಳೂರಿನಲ್ಲಿ ಮುಕ್ತಾಯಗೊಂಡಿತು. 3 ನೆಯ ಯೋಜನೆಯಲ್ಲಿ ಬಿ ಸಿ ಜಿ ವ್ಯಾಕ್ಸಿನೇಷನ್ ಚಳುವಳಿಯನ್ನು ವಿಸ್ತರಿಸಲು ಕೈಗೊಳ್ಳಬೇಕೆಂದು ನಿರ್ಧರಿಸಲಾಯಿತು.

೦೦

ಹಣ್ಣು ಆಗಲು ಅರಂಭವಾದ 4 ದಿನಗಳಿಂದ ಹಿಡಿದು 6 ದಿನಗಳ ವರೆಗೆ ಬೆಂಡೆಕಾಯಿಯನ್ನು ಕೊಯ್ಯಲು ಸಲಹೆಯಿದ ಅಸ್ಸಾಮಿನ ಜೊರ್ಹಾತಿನ ವ್ಯವಸಾಯ ಕಾಲೇಜಿನಲ್ಲಿ ಮಾಡಿದ ಸಂಶೋಧನೆಯಿಂದ ಗೊತ್ತಾಗಿದೆ.

೦೦

ಬಿ ಸಿ ಜಿ ವ್ಯಾಕ್ಸಿನೇಷನ್ ಚಳುವಳಿಯಲ್ಲಿ ವಿದ್ಯಾಸು ರಾಜ್ಯ ಮುಂದಿದೆ.

ಹಣ ಮಂಜೂರು

ಮೈಸೂರು ಸರ್ಕಾರದವರು ಅಥಣಿ ಬ್ಯಾಂಕಿನಲ್ಲಿರುವ ಕಾಗವಾಡದಲ್ಲಿ ಬಡಿಗ ತನ ಮತ್ತು ಕಮ್ಮಾರಿಕೆ ಕಸಬಿನ ಸಾಮಾನ್ಯ ಸೌಕರ್ಯ ಕೇಂದಕ್ಕೆ 14250 ರೂಪಾಯಿಗಳಿಗೆ ಮಂಜೂರಾತಿಯನ್ನಿತ್ತಿದ್ದಾರೆ.

೦೦

ಮೈಸೂರು ಸರ್ಕಾರದವರು ಮಾಂಜರಿನ ಬ್ಯಾಂಕಿನಲ್ಲಿರುವ ಶಿವಾಂ ಪಟ್ಟಣದಲ್ಲಿ ಶಿಲ್ಪಕಲೆಯ ಸಾಮಾನ್ಯ ಸೌಕರ್ಯದ ಕೇಂದ ಕ್ಕಾಗಿ 11100 ರೂಪಾಯಿಗಳ ಸಹಾಯ ಧನವನ್ನು ಮಂಜೂರುಮಾಡಿದ್ದಾರೆ

ರಹದಾರಿ ಪದ್ಧತಿ

ಈ ತಿಂಗಳು 22 ನೆಯ ತಾರೀಖಿನಿಂದ ಗೋವಾ ಪ್ರವೇಶಕ್ಕೆ ರಹದಾರಿ ಪದ್ಧತಿ ಜಾರಿಗೆ ಬರುವದು.

ಅಭಿವೃದ್ಧಿ ಕಾರ್ಯ

ಬೆಂಗಳೂರಿನಲ್ಲಿರುವ ಸರ್ಕಾರಿ ಪೋರ್ಸಲೈನ್ ಕಾರ್ಖಾನೆಯ ಅಭಿವೃದ್ಧಿಗೆ ಈ ವರ್ಷ ರೂ 10 ಕೋಟಿ ವೆಚ್ಚಮಾಡಲಾಗುವದು.

ಅಣು ಶಕ್ತಿ ಬಳಕೆ

ಭಿಲೈ ಉಕ್ಕಿನ ಕಾರ್ಖಾನೆಯಲ್ಲಿ ಪರಮಾಣು ಶಕ್ತಿಯ ಬಳಕೆ ಆಗುತ್ತಿದೆ.

ಚಿತ್ರದಲ್ಲಿರುವ ಧಾನ್ಯ ಸಂಗ್ರಹಣಾ ಕೇಂದ್ರದಲ್ಲಿ ಸಾಗಿಸಲಾದ ಹೈಬ್ರೀ-ಜೋಳ ೮೦೦ ಟನ್ ಗಳಷ್ಟು ಬಿಂಬಿಸಲಾಗಿದೆ. ಈ ಸಂಗ್ರಹಣಾ ಕೇಂದ್ರದಲ್ಲಿ ಧಾನ್ಯವನ್ನು ಚೀಲಗಳಲ್ಲಿ ಇಡಲಾಗಿದೆ. ಜೋಳವನ್ನು ಪಡೆಯುವ ರೈತರಿಗೆ ಕೊಡಲಾಗುವದು ಎಂದು ಚಿತ್ರ.

ಶ್ರೀ ಶೃಂಗೇರೀ ಜಗದ್ಗುರುಗಳವರಾದ ಶ್ರೀಮದಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರಿಗೆ ಸುಸ್ವಾಗತವನ್ನು ನೀಡಿ ವಿನ್ನವತ್ತಳೆಯನ್ನು ಸಮರ್ಪಿಸಲು ನಾಳೆ ಸಂಜೆ 6 ಗಂಟೆಗೆ ಮೈಸೂರು ಶ್ರೀ ಅಭಿನವ ಶಂಕರಾಲಯದಲ್ಲಿ ಸಮಾರಂಭ ಏರ್ಪಡಿಸಿದೆ.

ವುಡ್‌ಲ್ಯಾಂಡ್ಸ್ ವೈಭವ 6 ನೇ ವಾರ

ಜಬ್ ಪ್ಯಾರ್ ಕಿಸೀಸೆ ಹೋತಾಹೈ

ವೇವ್‌ಅನಂದ್, ಅಶಾ ಪರಾಖ್ ಮತ್ತಿರ ಪ್ರಖ್ಯಾತ ತಾರೆಯರು ಪಾತ್ರವಹಿಸಿರುವ

ಅತ್ಯಂತ ಹುಸಿಂಜನ ಹಿಂದಿ ಚಿತ್ರ [ದಿನವಹಿ 3 ಪ್ರದರ್ಶನಗಳು

ಆಪೆರಾ— ಯಶಸ್ವಿ 3 ನೇ ವಾರ

ನಾಗಾರ್ಜುನ (ಕನ್ನಡ)

ತಾರಾಗಣ— ರಾಜಕುಮಾರ್, ನಾಗಯ್ಯ, ವಂಲಕ್ಷ್ಮಿ, ಹರಿಣಿ, ನರಸಿಂಹರಾಜು

ಕಾಂತಾ ರಾವ್, ರಾಜನಾಲ [ದಿನವಹಿ 3 ಆಟಗಳು]

SHAKTI SUDHA

A Superb Tonic

ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ

ಅ ಶೋ ಕಾ ಫಾರ್ಮಸಿ

ಲ್ಯಾನ್ಸ್‌ಡೌನ್ ಬಜಾರ್ ಮೈಸೂರು

For Quality Printing

L. N. Press

Sivarampet, Mysore

Help ' The Gorakshana '

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚಿಬ್ಬಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ

ಗೋರಕ್ಷಣ ಪತ್ರಿಕೆಗೆ ಸಹಾಯಧನವನ್ನು ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ಪಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು 4

Edited, Printed & Published by the Proprietor, Dharma Prachara Nikata M. S. Krishna Rao, at the Satyavadi Press Chamarajapuram, Mysore 4.